# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 812
**ಮಾನ್ಯ ಸದಸ್ಯರ ಹೆಸರು** : ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ)
**ಉತ್ತರಿಸಬೇಕಾದ ದಿನಾಂಕ** : 13.03.2025
**ಉತ್ತರಿಸುವ ಸಚಿವರು** : ಕಾನೂನು, ನ್ಯಾಯ, ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಪ್ರವಾಸೋದ್ಯಮ ಇಲಾಖೆ ಮತ್ತು ಅಭಿವೃದ್ಧಿ ನಿಗಮದ ಅಡಿಯಲ್ಲಿ ಬರುವ ಹೋಟೆಲ್ ರೆಸಾರ್ಟ್‌ಗಳು ಮತ್ತು ಹೋಂ ಸ್ಟೇಗಳು ಎಷ್ಟು; | ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಡಿ 27 ಹೋಟೆಲ್‌ಗಳನ್ನು ನಿರ್ವಹಣೆ ಮಾಡಲಾಗುತ್ತಿದೆ. ಪ್ರವಾಸೋದ್ಯಮ ಇಲಾಖೆಯ ಮಾಲೀಕತ್ವದಲ್ಲಿ ಯಾವುದೇ ಹೋಮ್ ಸ್ಟೇಗಳು ಇರುವುದಿಲ್ಲ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿರುವ ಒಟ್ಟು 1345 ಖಾಸಗಿ ಹೋಂಸ್ಟೇಗಳಿಗೆ ಇಲಾಖೆಯ ಮಾನದಂಡಗಳನ್ವಯ ನೋಂದಣಿ ನೀಡಲಾಗಿದೆ. |
| ಆ) | ಪ್ರವಾಸೋದ್ಯಮ ಇಲಾಖೆಯಿಂದ ಮತ್ತು ಅಭಿವೃದ್ಧಿ ನಿಗಮದಿಂದ ಹೋಟೆಲ್ ರೆಸಾರ್ಟ್ ಮತ್ತು ಹೋಮ್ ಸ್ಟೇಗಳನ್ನು ಎಷ್ಟು ವರ್ಷದ ಅವಧಿಯವರೆಗೆ ಗುತ್ತಿಗೆ ನೀಡಲಾಗಿದೆ; | ಪ್ರವಾಸೋದ್ಯಮ ಇಲಾಖೆಯಿಂದ ಹೋಟೆಲ್‌ಗಳು ಮತ್ತು ಹೆದ್ದಾರಿ ಸೌಲಭ್ಯಗಳನ್ನು 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ. ಪ್ರವಾಸೋದ್ಯಮ ಇಲಾಖೆಯ ಮಾಲೀಕತ್ವದಲ್ಲಿ ಯಾವುದೇ ಹೋಂಸ್ಟೇಗಳು ಇರುವುದಿಲ್ಲ. |
| ಇ) | ಈ ರೀತಿಯಾಗಿ ಗುತ್ತಿಗೆ ನೀಡಿದ್ದಲ್ಲಿ, ಪ್ರವಾಸೋದ್ಯಮ ಮತ್ತು ನಿಗಮದಿಂದ ಅತಿ ಹಿಂದುಳಿದ ವರ್ಗಗಳ ಗುತ್ತಿಗೆದಾರರಿಗೆ ಪ್ರಾಶಸ್ತ್ಯವನ್ನು ನೀಡಲಾಗಿದೆಯೇ; | ಇಲಾಖೆಯ/ನಿಗಮದ ಹೋಟೆಲ್ ಅಥವಾ ರೆಸಾರ್ಟ್‌ಗಳ ಗುತ್ತಿಗೆಯನ್ನು ಟೆಂಡರ್ ಮೂಲಕ ನೀಡಲಾಗುವುದು, ಸದರಿ ಟೆಂಡರ್‌ಗಳಲ್ಲಿ ಅತೀ ಹಿಂದುಳಿದ ವರ್ಗದವರೂ ಕೂಡ ಭಾಗವಹಿಸಿ, ಇಲಾಖೆಯ/ ನಿಗಮದ ಮಾನದಂಡಗಳನ್ವಯ ಆಯ್ಕೆಯಾದಲ್ಲಿ ಅವರಿಗೂ ಕೂಡ ಗುತ್ತಿಗೆ ನೀಡಲಾಗುವುದು. |
| ಈ) | ನೀಡದೇ ಇದ್ದಲ್ಲಿ, ಯಾವ ಕಾರಣಕ್ಕಾಗಿ ಅತೀ ಹಿಂದುಳಿದ ಗುತ್ತಿಗೇದಾರರಿಗೆ ನೀಡದೇ ಇರಲು ಕಾರಣವೇನು? | |

**TOR 67 TDV 2025**

**(ಎಚ್.ಕೆ.ಪಾಟೀಲ್)**
ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ
ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ
ಪ್ರವಾಸೋದ್ಯಮ ಸಚಿವರು